ಸದರೀ ದರಖಾಸ್ತುದಾರಳಾದ ಭವಾನಿಬಾಯಿಯ ಅರ್ಜೀಯನ್ನು 188"ನೇ ಇಸವಿ ಜುಲೈ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪರಕರಾಮಜಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮೇ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 20ನೇ ಮೇ 1887.

ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಜೇವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾರೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಪ್ರಕಾರ ನಾಶ ಪಡಿಸಲ್ಪಡುತ್ತೆ.

ಜಂಬರ್ ನಂಬರ್.	ದಸ್ತಾವೇಜಿನ ನಂಬರ್ ಮತ್ತು ಸಬ್‌ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರೆಸಿಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜುಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಬಗ್ಗೆ ಹಾಜರಾದ ತಾರೀಖು.	ರಿಜಿಸ್ಟ್ರಾರ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	1ನೇ ಬುಕ್ಕು ನಂಬರ್ 236. ——— 1884—85 ಕೊಪ್ಪಾ ಸಬ್ ರಿಜಿಸ್ಟ್ರಾರ್.	ಸಳ್ಳೀಬೈಲ್ ಗ್ರಾಮದ ಪೇಟೆ ವಾಸಸ್ಥ ವೈಶ್ಯರ ಜಾತಿ ವ್ಯಾಪಾರಿ ಕಸಬಿನ ವೆಂಕಟಪ್ಪಶೆಟ್ಟರ ಮಗ ಭೀಮಶೆಟ್ಟಿ	ಸಳ್ಳೀಬೈಲ್ ಮಜರೆ ಹೊಸತೋಟದವಾಸಸ್ಥ ವೆಂಕಟಂಣಗೌಡರ ಮಗ ನಾಮಧಾರಿ ಜಾತಿ ಮಲ್ಲಂಣಗೌಡ	30ನೇ ಜನವರೀ 1885ನೇ ಇಸವಿ	30ನೇ ಜನವರೀ 1885ನೇ ಇಸವಿ	150 ರೂಪಾಯಿಗಳಿಗೆ ಸಳ್ಳೀಬೈಲ್ ಪೇಟೇಯಲ್ಲಿರುವ ಮನೆ ಮುಂಬಾರ 4 ಅಂಕಣವುಳ್ಳ ಹುಲ್ಲುಮನೆಯನ್ನು ಈ ಹಣಕ್ಕಾಗಿ ಅಡಮಾನ ಮಾಡಿರುತ್ತೆ. ಇದಕ್ಕೆ ತಿಂಗಳು ವಂದರ $1\frac{1}{2}$ ರೂಪಾಯಿ ಪ್ರಕಾರ ವಸೂಲ್ ಕೊಡುತ್ತಾ ಬರುವದಾಗಿಯೂ ಮತ್ತು ಸರ್ವಜಿತು ಸಂವತ್ಸರದ ಮಾಘ ಬಹುಳ ೩ಂಗೆ ಅಸಲ್ ಹಣ ಪಾವತೀಮಾಡಿ ದಸ್ತಾವೇಜು ವಾಪಸ್ ಪಡಿಯುವದಾಗಿ.
2	1ನೇ ಬುಕ್ಕು ನಂಬರ್ 229 ——— 1884—85 ಕೊಪ್ಪಾ ಸಬ್ ರಿಜಿಸ್ಟ್ರಾರ್.	ತಿಂಗೇರೀಮೆ ಕಲ್ಲು ಕುಳ್ಳಿ ಗ್ರಾಮದ ವಾಸಸ್ಥ ನಾಮಧಾರೀ ಜಾತಿ ಮಲ್ಲಣ್ಣನ ಮಗ ಗಿಡ್ಡಂಣ ಹೆಗ್ಗಡೆ	ಯಡದಾಳು ಗ್ರಾಮದ ವಾಸಸ್ಥ ಒಕ್ಕಳಿ ಜಾತಿ ಬ್ರಾಹ್ಮಣ ನಾಬಯ್ಯನ ಮಗ ಕೇಪಯ್ಯ	21ನೇ ಜನವರೀ 1885ನೇ ಇಸವಿ	21ನೇ ಜನವರೀ 1885ನೇ ಇಸವಿ	200 ರೂಪಾಯಿಗಳಿಗೆ ಕಿಗ್ಗದ ಮಾಗಣಿ ಯಡದಾಳು ಗ್ರಾಮದಲ್ಲಿರುವ ತನ್ನ ಹಿಡುವಳಿ ಬಾಬತು ಜಮೀನುಗಳನ್ನು ಶುದ್ಧ ಕ್ರಯಕ್ಕೆ ಕೊಟ್ಟು ಇರುವದಾಗಿಯು ಮತ್ತು 1880ನೇ ಇಸವಿ ಅಕ್ಟೋಬರ್ ತಾರೀಖು 27ರಲ್ಲು ರಿಜಿಸ್ಟ್ರಾದ ದಸ್ತಾವೇಜನ್ನು ಕೂಡಾ ದಾಖಲೆ ಬಗ್ಗೆ ಕೊಟ್ಟು ಯಿರುತ್ತೆಂಬುದಾಗಿ.

ತಾರೀಖು 31ನೇ ಮೇ 1887.

ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಜೇವಾರಸ್ ದಸ್ತಾವೇಜನ್ನು ಕ್ರಮ ಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾರೀಕರಾಗಲೀ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರೀರೆ ನಾಶಪಡಿಸಲ್ಪಡುತ್ತೆ.